ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಮಂಗಳೂರು ವಿಭಾಗ: ಮಂಗಳೂರು
KARNATAKA STATE ROAD TRANSPORT CORPORATION
ಬಿಜೈ, ಮಂಗಳೂರು 575004, BEJAI MANGALURU 575004

---

ಸಂ:ಕರಾರ:ಮಂವಿ:ಸಂಚಾರ:ವಾಣಿಜ್ಯ: 2612 :2019-20 ದಿನಾಂಕ:11.10.2019

# :ಇ-ಟೆಂಡರ್ ಪ್ರಕಟಣೆ ಸಂ:04 :2019-20
## (ಜಾಹೀರಾತು ಹೋರ್ಡಿಂಗ್ಸ್/ಗ್ಲೋಸೈನ್ ಬೋರ್ಡ್)
## (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

****

ಕ.ರಾ.ರ.ಸಾ.ನಿಗಮದ ಮಂಗಳೂರು ವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣ/ಘಟಕಗಳಲ್ಲಿ/ವಿಭಾಗೀಯ ಕಾರ್ಯಾಗಾರದಲ್ಲಿ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಬೋರ್ಡ್ ಅಳವಡಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು(05) ವರ್ಷದ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http./www.eproc.karnataka.gov.in" ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪರವಾನಿಗೆ ಅವಧಿ ಪೂರ್ಣಗೊಂಡ ನಂತರ ಪುನಃ ಇ-ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು. ವಿವರಗಳು ಕೆಳಕಂಡಂತಿದೆ.

**ಪ್ಯಾಕೇಜ್ ಸಂ:01- ಜಾಹೀರಾತು ಹೋರ್ಡಿಂಗ್ಸ್:**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ (ರೂ.ಗಳಲ್ಲಿ) | ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|---|
| 1 | ಮಂಗಳೂರು ಘಟಕ-1 (ಕಾಂಪೌಂಡ್ ಗೋಡೆ) | 20 x 10 | 5 | 1000 | 16500 | 49000/- | 49000/- | 500/- | 195/- |

**ಪ್ಯಾಕೇಜ್ ಸಂ:2–ಜಾಹೀರಾತು ಹೋರ್ಡಿಂಗ್ಸ್:**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋಡಿರ್ಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ (ರೂ.ಗಳಲ್ಲಿ) | ಇ–ಪ್ರೊಕ್ಯೂರ್ ಮೆಂಟ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಮಂಗಳೂರು 3ನೇ ಹಾಗೂ ನರ್ಮ್ ಘಟಕ | 20 x 10 | 9 | 1800 | 14300 | 42400/- | 500/- | 169/- |
| 2 | ವಿಭಾಗೀಯ ಕಾರ್ಯಾಗಾರ (ಎ,ಜೆ, ಆಸ್ಪತ್ರೆ ಎದುರು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ) | 20 x 10 | 7 | 1400 | 12100 | 35800/- | 500/- | 143/- |
| 3 | ಮಂಗಳೂರು ಘಟಕ–2 (ಎ,ಜೆ, ಆಸ್ಪತ್ರೆ ಎದುರು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ) | 20 x 10 | 4 | 800 | 6600 | 19300/- | 500/- | 118/- |
| | ಒಟ್ಟು | | 20 | 4000 | 33000 | 97500/- | 1500/- | 390/- |

**ಪ್ಯಾಕೇಜ್ ಸಂ:3–ಜಾಹೀರಾತು ಹೋರ್ಡಿಂಗ್ಸ್:**

| ಕ್ರ. ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್ ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ ಮೆಂಟ್ ಮೂಲಕ ಪಾವತಿಸಬೇಕ ದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|

| | | | | | | | | |
|---|---|---|---|---|---|---|---|---|
| 1 | ಉಡುಪಿ ಘಟಕ (ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವ) | 20 x 10 | 6 | 1200 | 7200 | 21100/- | 500 | 118/- |

## ಪ್ಯಾಕೇಜ್ ಸಂ:4–ಜಾಹೀರಾತು ಹೋರ್ಡಿಂಗ್ಸ್:

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್ ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಕುಂದಾಪುರ ಘಟಕ (ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವ) | 20 x 10 | 2 | 400 | 3300 | 9400/- | 500/- | 118/- |

## ಪ್ಯಾಕೇಜ್ ಸಂ:5– ಜಾಹೀರಾತು ಹೋರ್ಡಿಂಗ್ಸ್:

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್ ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ (ರೂ.ಗಳಲ್ಲಿ) | ಇ–ಪ್ರೊಕ್ಯೂರ್ ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಕುಂದಾಪುರ ಬಸ್ ನಿಲ್ದಾಣ (ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವ) | 20 x 10 | 7 | 1400 | 16500 | 49000/- | 500/- | 195/- |

**ಪ್ಯಾಕೇಜ್ ಸಂ:6** ಮಂಗಳೂರು ಬಸ್ ನಿಲ್ದಾಣ: ಹೋರ್ಡಿಂಗ್ಸ್ ಹೊರ ಆವರಣ (ಯುನಿ ಪೋಲ್ ಒಳಗೊಂಡು )

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್ ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾ ಇ.ಎಂ.ಡಿ ಮೊ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಮಂಗಳೂರು ಬಸ್ ನಿಲ್ದಾಣ ಲಘು ವಾಹನ ಪ್ರವೇಶ ದ್ವಾರ ಆವರಣ (ಪ್ರೀಪೈಡ್ ಅಟೋರಿಕ್ಷಾ ಪಾರ್ಕಿಂಗ್ ಹತ್ತಿರ ಯುನಿ ಪೋಲ್) | 30 x 20 | 1 | 600 | 13200 | 39100/- | 500/- | 156/- |
| 2 | ಮಂಗಳೂರು ಬಸ್ ನಿಲ್ದಾಣ ಬಸ್ಸು ನಿಲ್ದಾಣದ ಆವರಣ ಕಂಪೌಂಡ್ ಗೋಡೆ (ಕಾರ್ ಪಾರ್ಕಿಂಗ್ ಎಡಗಡೆ ಆವರಣ) | 30 x 20 (ಎರಡು ಬದಿ) | 2 | 600*2 =1200 | 26400 | 78700/- | 500/- | 312/- |
| | | ಒಟ್ಟು | 3 | 1800 | 39600 | 117800/- | 1000 | 468/- |

**ಪ್ಯಾಕೇಜ್ ಸಂ:7** ಮಂಗಳೂರು ಬಸ್ ನಿಲ್ದಾಣ: ಹೋರ್ಡಿಂಗ್ಸ್ ಹೊರ ಆವರಣ (ಯುನಿ ಪೋಲ್ Lit ಒಳಗೊಂಡು)

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಮಂಗಳೂರು ಬಸ್ ನಿಲ್ದಾಣ (ಮುಖ್ಯ ವಾಹನ ಪ್ರವೇಶ ದ್ವಾರ ಆವರಣ) | 30 x 20 | 1 | 600 | 13750/- | 40750/- | 500/- | 162/- |

**ಪ್ಯಾಕೇಜ್ ಸಂ:8** ಮಂಗಳೂರು ಬಸ್ ನಿಲ್ದಾಣ: ಹೋರ್ಡಿಂಗ್ಸ್ ಹೊರ ಆವರಣ (Non Lit)

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|
| 1 | ಮಂಗಳೂರು ಬಸ್ ನಿಲ್ದಾಣ (ಮುಖ್ಯ ವಾಹನ ಪ್ರವೇಶ ದ್ವಾರದ ಎಡಗಡೆ ಕಾಂಪೌಂಡ್ ಗೋಡ ಸ್ಟ್ರಕ್ಚರ್ ಒಳಗೊಂಡು) | 30 x 15 | 450 | 6600 | 19300/- | 500/- | 118/- |
| 2 | ಮಂಗಳೂರು ಬಸ್ ನಿಲ್ದಾಣ (ಲಘು ವಾಹನ ಪ್ರವೇಶ ದ್ವಾರದ ಎಡಗಡೆ ಕಾಂಪೌಂಡ್ ಗೋಡೆ) | 25*12 | 300 | 8800 | 25900/- | 500/- | 104/- |
| | ಒಟ್ಟು | | 700 | 15400 | 45200/- | 1000/- | 222/- |

**<u>ಪ್ಯಾಕೇಜ್ ಸಂ:9</u>** ಮಂಗಳೂರು ಬಸ್ ನಿಲ್ದಾಣ:ಒಳ ಆವರಣ ಫ್ಲಾಟ್ ಫಾರಂ ಫಲಕ ಮತ್ತು ಗ್ಲೋಸೈನ್ ಬೋರ್ಡ್

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಒಟ್ಟು ಫಲಕಗಳು | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾ ಇ.ಎಂ.ಡಿ ಮೊ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | ಫ್ಲಾಟ್ ಫಾರಂ ಫಲಕ (ಬೋರ್ಡ್ ಒಳಗೊಂಡು) | 4*1=4 (2 ಕಡೆ ಪ್ರದರ್ಶನ) | 13 | 104 | 3432 | 9796/- | 500/- | 118/- |
| 2 | ಬಸ್ ನಿಲ್ದಾಣ ಕಟ್ಟಡ (ವಿಂಡೋ ಡಿಸ್‌ಪ್ಲೇ ಸ್ಟ್ರಕ್ಚರ್ ಒಳಗೊಂಡು) | 18 ಅಡಿ x 10’ = 180 ಚದರ ಅಡಿ | 1 | 180 | 6930 | 20290/- | 500/- | 118/- |
| 3 | ಬಸ್ ನಿಲ್ದಾಣದ ಪ್ರವೇಶ ದ್ವಾರದಲ್ಲಿ (ಬೋರ್ಡ್ ಒಳಗೊಂಡು) | 26’ x 4 (ಒಂದು ಬದಿ) | 1 | 104 | 3432 | 9796.00 | 500/- | 118/- |
| 4 | ಬಸ್ ನಿಲ್ದಾಣ ಶೀಟ್ ಬೀಮ್ (ಬೋರ್ಡ್ | 4*2=8 (2 ಕಡೆ | 20 | 320 | 35200 | 105100.00 | 500/- | 415/- |

| | | | | | | | | |
|---|---|---|---|---|---|---|---|---|
| | ಒಳಗೊಂಡು) | ಪ್ರದರ್ಶನ) | | | | | | |
| | | ಒಟ್ಟು | 35 | 708 | 48994 | 144982/- | 2000/- | 769/- |

**ಪ್ಯಾಕೇಜ್ ಸಂ:10** ಮಂಗಳೂರು ಬಸ್ ನಿಲ್ದಾಣ : ಹೊರ ಆವರಣ

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ | ಒಟ್ಟು ಫಲಕಗಳು | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ಮಾಸಿಕ ಪರವಾನಿಗೆ ಶುಲ್ಕ | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 1 | (ಗ್ಲೋಸೈನ್ ಬೋರ್ಡ್) | ಲಘು ವಾಹನ– ಪ್ರವೇಶ ದ್ವಾರದಲ್ಲಿ 36x5, 10'x3 (ಎರಡೂ ಬದಿ) ಸ್ವಾಗತ ಕಮಾನು (ಸ್ಟ್ರಕ್ಚರ್ ಒಳಗೊಂಡು) | 1+2 | 480 | 13728 | 40684/- | 500/- | 162/- |
| 2 | | ಪಾದಾಚಾರಿಗಳ ಪ್ರವೇಶ ದ್ವಾರದಲ್ಲಿ 34'x5, 5'x3 | 1+2 | 200 | 5720 | 16660/- | 500/- | 118/- |
| 3 | | ಪಾದಾಚಾರಿಗಳ ಪ್ರವೇಶ ದ್ವಾರ ಬಲಬದಿ ಕಾಂಪೌಂಡ್ ಗೋಡೆ 4' x2, (ಎರಡೂ ಬದಿ)=8*2 | 10 ಬೋರ್ಡ್ | 160 | 4576 | 13228/- | 500/- | 118/- |
| | ಒಟ್ಟು | | 16 | 840 | 24024 | 70572 | 1500 | 398 |

| ಕ್ರ .ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ–ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 12.11.2019 | 16:00 |
| 2 | ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ). | 14 .11.2019 | 11:30 |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು 575004 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ ಹಾಗೂ ಸಂಪರ್ಕಿಸುವ ದೂರವಾಣಿ ಸಂಖ್ಯೆ:–

ವಿಭಾಗೀಯ ಸಂಚಾರ ಅಧಿಕಾರಿ–7760990702 & ಸಹಾಯಕ ಸಂಚಾರ ವ್ಯವಸ್ಥಾಪಕರು –7760990711

Last date for submitting application : As per e-procurement portal.
Tender will be opened on : As per e-procurement portal.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:ಮಂಗಳೂರು ವಿಭಾಗ.

:1:

ಸೂಚನೆಗಳು: ವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣ/ಘಟಕಗಳಲ್ಲಿ/ವಿಭಾಗೀಯ ಕಾರ್ಯಾಗಾರದಲ್ಲಿ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಬೋರ್ಡ್,ಫ್ಲಾಟ್ ಫಾರಂ ಫಲಕ, ಸ್ವಾಗತ ಕಮಾನು ಅಳವಡಿಸಿ ಜಾಹೀರಾತು ಪ್ರದರ್ಶಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು(05) ವರ್ಷದ ಅವಧಿಗೆ ಪರವಾನಿಗೆಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತು ಮತ್ತು ನಿಬಂಧನೆಗಳು (ಸಾ.ಸ್ಥಾ.ಆ.ಸಂ.788/2017ರಂತೆ)

1. ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಅರ್ಜಿ ಸಲ್ಲಿಸುವುದು ಹಾಗೂ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

2. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗೆ ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸುವುದು ಸದರಿ ಸಮಯದಲ್ಲಿ ಉಂಟಾಗುವ ಯಾವುದೇ ತಾಂತ್ರಿಕ ದೋಷಗಳಿಗೆ ಕ.ರಾ.ರ.ಸಾ.ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

3. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗೆ ಭಾಗವಹಿಸುವ ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಲ್ಲಿ ಟೆಂಡರ್ ನಿಯಮಾವಳಿಗಳನ್ನು ಪೂರೈಸುವುದು.

4. ಟೆಂಡರ್‌ಗೆ ಭಾಗವಹಿಸುವ ಬಿಡ್‌ದಾರರು ಅರ್ಜಿ ಸಲ್ಲಿಸುವ ಮೊದಲು ತಮ್ಮ ಸ್ವಂತ ಖರ್ಚಿನಲ್ಲಿ ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತ ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ನಿಗದಿತ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

5. **ಟೆಂಡರ್ ಅರ್ಜಿ ಶುಲ್ಕ, ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತ:**

    1. ಇ–ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು / ಅರ್ಜಿದಾರರು ನಿಗದಿತ ಇ.ಎಂ.ಡಿ. ಮೊತ್ತದಲ್ಲಿ ರೂ.500/– ನ್ನು ಇ–ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ. ಮೊತ್ತವನ್ನು Divisional Controller,

K.S.R.T.C, Mangaluru Division, Mangaluru ರವರ ಪದನಾಮಕ್ಕೆ ಡಿ.ಡಿ. ರೂಪದಲ್ಲಿ ಪಡೆದು ಸದರಿ ಡಿ.ಡಿ ಯ ಹಿಂಭಾಗದಲ್ಲಿ ತಮ್ಮ ಹೆಸರು, ಬಿಡ್ ಮಾಡುವ ಜಾಹೀರಾತು ಪ್ಯಾಕೇಜಿನ ಸಂಖ್ಯೆಯನ್ನು ನಮೂದಿಸಿ, ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ–ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು. ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಫ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜರಾಕ್ಸ್ ಪ್ರತಿಗಳನ್ನು ಇ.ಎಂ.ಡಿ ಮತ್ತು ಅರ್ಜಿ ಶುಲ್ಕದ ಮೂಲ ಡಿ.ಡಿ ಜೊತೆಯಲ್ಲಿ ದಿ:04.11.2019ರಿಂದ ಟೆಂಡರ್ ತೆರೆಯುವ ಕೊನೆಯ ದಿನಾಂಕ;14.11.2019 ರ ಬೆಳಗ್ಗೆ 11.00 ಗಂಟೆಯ ಒಳಗೆ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿ ರುವ ಬಾಕ್ಸ್‌ನಲ್ಲಿ ಹಾಕುವುದು.

2. ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು(03)ಪಟ್ಟು ಮೊತ್ತವನ್ನು ಇ.ಎಂ.ಡಿ. (Earnest Money Deposiಣ)ಯನ್ನಾಗಿ ನಿಗಧಿಪಡಿಸಲಾಗಿರುತ್ತದೆ.
3. The tenderer shall pay processing fee and EMD through e-procurement following four modes of payment: a) Debit Card, b) Credit Card, c) OTC (Over the counter) and NEFT (National Electronic fund transfer).
4. The tenderer shall pay processing fee Rs.500/-through e-procurement following four modes of payment: a) Debit Card, b) Credit Card, c) OTC (Over the counter) and NEFT (National Electronic fund transfer).
5. ಅರ್ಜಿದಾರರು/ಬಿಡ್‌ದಾರರು ಪ್ರಕಟಣೆಯಲ್ಲಿ ಜಾಹೀರಾತು ಪ್ಯಾಕೇಜಿನ ಪರವಾನಿಗೆಗಾಗಿ ಪ್ಯಾಕೇಜಿವಾರು ನಿಗದಿಪಡಿಸಿದ ಅರ್ಜಿ ಶುಲ್ಕವನ್ನು Divisional Controller, K.S.R.T.C, Mangaluru Division ರವರ ಪದನಾಮಕ್ಕೆ ಪ್ರತ್ಯೇಕವಾಗಿ ಡಿ.ಡಿ. ರೂಪದಲ್ಲಿ ಪಡೆದು ಸದರಿ ಡಿ.ಡಿ ಯ ಹಿಂಭಾಗದಲ್ಲಿ ತಮ್ಮ ಹೆಸರು, ಬಿಡ್ ಮಾಡುವ ಪ್ಯಾಕೇಜಿನ ಹೆಸರು & ಕ್ರಮಸಂಖ್ಯೆಯನ್ನು ನಮೂದಿಸಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.



6. ಟೆಂಡರ್‌ಗೆ ಭಾಗವಹಿಸುವ ಬಿಡ್‌ದಾರರು/ಅರ್ಜಿದಾರರು ನಿಗದಿತ ಇ.ಎಂ.ಡಿ. ಮೊತ್ತದಲ್ಲಿ ರೂ.500/–ನ್ನು ಇ–ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ. ಮೊತ್ತವನ್ನು Divisional Controller, K.S.R.T.C, Mangaluru Division ರವರ ಪದನಾಮಕ್ಕೆ ಡಿ.ಡಿ. ರೂಪದಲ್ಲಿ ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ–ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.
7. ಟೆಂಡರ್ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತಕ್ಕೆ, ಟೆಂಡರ್ ಪ್ರಕಟಣೆಯ ದಿನಾಂಕದ ಅವಧಿಯಲ್ಲಿ ಪಡೆದುಕೊಂಡಿರುವ ಡಿ.ಡಿ.ಯನ್ನು ಮಾತ್ರ ಪರಿಗಣಿಸಲಾಗುವುದು.

8. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
9. ಬಿಡ್ಡುದಾರರು ನಮೂದಿಸಿರುವ ಪೂರ್ಣ ಪ್ಯಾಕೇಜನ್ನು ಬಿಡ್ಡು ಮಾಡುವುದು. ಅಪೂರ್ಣ ಬಿಡ್ಡನ್ನು ಪರಿಗಣಿಸಲಾಗುವುದಿಲ್ಲ.
10. ಬಿಡ್ಡುದಾರರು ಪ್ರತೀ ಪ್ಯಾಕೇಜಿನಲ್ಲಿ ಬಿಡ್ಡು ಮಾಡಿರುವ ಒಟ್ಟು ಅತೀ ಹೆಚ್ಚಿನ ದರ/ಮಾಸಿಕ ಪರವಾನಿಗೆ ಶುಲ್ಕ ನಮೂದಿಸಿರುವುದನ್ನು H1 ಬಿಡ್ಡು ಮೊತ್ತವನ್ನಾಗಿ ಪರಿಗಣಿಸಲಾಗುವುದು.
11. ಪೋರ್ಟಲ್‌ನಲ್ಲಿ ಅಪಲೋಡ್ ಮಾಡಿದ ಜಾಹೀರಾತಿಗೆ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು/ ಅರ್ಜಿದಾರರು ಸಹಿ ಮಾಡಿ, ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
12. ಒಂದು ವೇಳೆ ಬಿಡ್‌ದಾರರು/ಅರ್ಜಿದಾರರು ಇ-ಪೋರ್ಟ್‌ಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ-ಪೋರ್ಟ್‌ಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.
13. ಬಿಡ್‌ದಾರರ/ಅರ್ಜಿದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.
14. ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು/ಅರ್ಜಿದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಟೆಂಡರ್ ತೆರೆಯುವ ದಿನಾಂಕ / ಸಮಯದೊಳಗೆ ಈ ಕಛೇರಿಗೆ ಸಲ್ಲಿಸುವುದು.
15. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಸಲ್ಲಿಸಿ, ಅತಿ ಹೆಚ್ಚಿನ ಮೊತ್ತವನ್ನು ಬಿಡ್ ಮಾಡಿರುವ ಮತ್ತು ಸಮರ್ಪಕ ದಾಖಲೆಗಳನ್ನು ಸಲ್ಲಿಸಿರುವ ಬಿಡ್‌ದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡಲಾಗುವುದು.
16. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾನಿಗಮವು ಆಗಿಂದಾಗ್ಗೆ ವಿಧಿಸುವ/ಕಾಲ ಕಾಲಕ್ಕೆ ಬದಲಾಗುವ ಷರತ್ತು/ನಿಬಂಧನೆಗಳಿಗೆ ಇದಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸೇರ್ಪಡೆಯಾಗುವ ಯಾವುದೇ ಕಾನೂನುಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
17. ಬಿಡ್‌ದಾರರು/ಅರ್ಜಿದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ.

| ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ | ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar | ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ |

| | |
|---|---|
| Card, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಢೀಕರಣ ಪತ್ರ (ಅನುಭಂದ–1 (Annexure-1)ನ್ನು ಭರ್ತಿಗೊಳಿಸಿ ಅಪಲೋಡ್ ಮಾಡುವುದು.)<br>ಉ) ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. | (Voter ID, Aadhaar Card, Bank Passbook, Passport, etc)<br>ಆ) ಆದಾಯ ತೆರಿಗೆ ತೀರುವಳಿ ಪತ್ರ.<br>ಇ) ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ವಹಿವಾಟು ನಡೆಸಿರುವ ಬಗ್ಗೆ, 02 ವರ್ಷದ ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಈ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಉ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಊ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಋ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ(ಅನುಭಂದ–1 (Annexure-1)ನ್ನು ಭರ್ತಿಗೊಳಿಸಿ ಅಪಲೋಡ್ ಮಾಡುವುದು.) |

| | |
|---|---|
| | |

| ಕ್ರ.ಸಂ | **ಅಪ್ ಲೋಡ್ ಮಾಡಬೇಕಾಗಿರುವ ದಾಖಲಾತಿಗಳು** |
|---|---|
| **1** | ಅರ್ಜಿ ಶುಲ್ಕದ ಡಿ.ಡಿ. |
| **2** | ಇ.ಎಂ.ಡಿ ಮೊತ್ತದ ಡಿ.ಡಿ |
| **3** | ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ ಅನುಭಂದ–1 **(Annexure-1)** |
| **4** | **ಪಾನ್ ಕಾರ್ಡ್** |
| **5** | **ವೋಟರ್ ಐಡಿ/ಪಾಸ್ ಪೋರ್ಟ್** |
| **6** | **ಆಧಾರ್ ಕಾರ್ಡ್** |
| **7** | **ಷರತ್ತು ನಿಬಂಧನೆಗಳನ್ನು ಓದಿ ಸಹಿ ಮಾಡಿ ಅಪ್‌ಲೋಡ್ ಮಾಡುವುದು.** |

6. **ಪರವಾನಗಿ ಅವಧಿ: ಐದು(05) ವರ್ಷ.**
7. **ಭದ್ರತಾ ಠೇವಣಿ:**

i. ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. / RTGS / NEFT ಮೂಲಕ ಪಾವತಿ ಮಾಡುವುದು.

| ಕ್ರ.ಸಂ. | ಪರವಾನಗಿ ಅವಧಿ | ಒಟ್ಟು ಪಾವತಿಸಬೇಕಿರುವ ಭದ್ರತಾ ಠೇವಣಿ |
|---|---|---|
| 1 | 05 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |

ii. ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ಜಾಹೀರಾತು ಮತ್ತು ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

iii. ಭದ್ರತಾ ಠೇವಣಿ ಮೊತ್ತವನ್ನು ಡಿ.ಡಿ. ರೂಪದಲ್ಲಿ ಸಲ್ಲಿಸುವಾಗ Divisional Controller, K.S.R.T.C, Mangaluru Division ರವರ ಪದನಾಮಕ್ಕೆ ಡಿ.ಡಿ.ಪಡೆದು ಈ ಕಛೇರಿಗೆ ಸಲ್ಲಿಸುವುದು.

iv. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

v. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸಿಕೊಳ್ಳಲಾಗುವುದು.

vi. ಪರವಾನಗಿ ಅವಧಿ ಮುಕ್ತಾಯವಾದ ನಂತರ ನಿಗಮಕ್ಕೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸಲಾಗುವುದು.

8. **ಕರಾರು ಒಪ್ಪಂದ:**

**ಅ)**ಟೆಂಡರ್‌ನಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

**ಆ)** ಟೆಂಡರ್‌ನಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

**ಇ)** ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಸದರಿ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆದ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಈ) ಕರಾರು ಒಪ್ಪಂದ ಮಾಡಿಕೊಂಡು ವ್ಯವಹಾರ ನಡೆಸದೆ ಇದ್ದಲ್ಲಿ ಅಂತಹ ಪರವಾನಿಗೆದಾರರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು** ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

**9. ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST) ಪಾವತಿ:**

I. ಪರವಾನಗಿದಾರರು ಕರಾರು ಒಪ್ಪಂದ ಪ್ರಾರಂಭದ ಮಾಹೆಯ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಡಿ.ಡಿ. ಮೂಲಕ ಭದ್ರತಾ ಠೇವಣಿ ಜೊತೆ ಸಲ್ಲಿಸುವುದು.

II. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST)ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.

III. ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಪಡೆದುಕೊಳ್ಳುವುದು.

IV. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18ರಷ್ಟು ಬಡ್ಡಿಯನ್ನು ಕನಿಷ್ಠ '100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.

V. ಪರವಾನಗಿದಾರರು GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಈ ಕಚೇರಿಗೆ ಸಲ್ಲಿಸುವುದು.

VI. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

**10. <u>ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿ:</u>**

ಆಯ್ಕೆಯಾಗುವ ಪರವನಿಗೆದಾರರು ಸೂಚಿಸಿರುವ ಜಾಹೀರಾತು ಹೋರ್ಡಿಂಗ್ಸ್/ಯುನಿಪೋಲ್ ಫ್ಲಾಟ್‌ಫಾರಂ ಇತರ ಸ್ಟ್ರಕ್ಚರನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ಪ್ರತ್ಯೇಕವಾಗಿ ವಿದ್ಯುತ್‌ಚ್ಛಕ್ತಿ ಮೀಟರನ್ನು ಅಳವಡಿಸುವುದು.
ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

11. **ಹೆಚ್ಚುವರಿ ಸ್ಥಳಾವಕಾಶ:** ಪರವಾನಗಿದಾರರು ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಹೆಚ್ಚುವರಿ ಸ್ಥಳವನ್ನು ಅನಧಿಕೃತವಾಗಿ ಬಳಸಿಕೊಳ್ಳುವುದು ನಿಯಮ ಬಾಹಿರವಾಗಿರುತ್ತದೆ.

12. **ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:**

ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

13. **ಕರಾರು ರದ್ಧತಿಯ ಷರತ್ತುಗಳು:**

1. ಪರವಾನಗಿ ಪಡೆದ ಅವಧಿಯಿಂದ ಒಂದು ವರ್ಷದ ಒಳಗೆ ಪರವಾನಗಿದಾರರು, 6 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
2. ಯಾವುದೇ ಕಾರಣ ನೀಡದೇ, 4 ತಿಂಗಳ ನೋಟಿಸ್ ನೀಡಿ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.

3. ಒಂದು ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 4 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
4. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ, ಅಂತಹ ಪರವಾನಗಿದಾರರ ಪರವಾನಗಿಯನ್ನು ನಿಗಮದ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ನಿಗಮದಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.
5. ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ / ಆವರಣವನ್ನು ಮೇಲ್ದರ್ಜೆಗೇರಿಸುವ / ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ನಿಗಮವು ಪರವಾನಗಿದಾರರಿಗೆ ಒಂದು ತಿಂಗಳು ಮುಂಗಡ ನೋಟಿಸ್‌ನ್ನು ಜಾರಿ ಮಾಡಿ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.

21) **ಬಿಡ್‌ದಾರರ / ಪರವಾನಗಿದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸುವ ಸಂದರ್ಭಗಳು:**

1. ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ/ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ./ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು/ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
2. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
3. ಒಂದು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಒಂದು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
4. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಉಪ–ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

5. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅಂತಹ ಬಿಡ್‌ದಾರರು/ಅರ್ಜಿದಾರರು ಒಂದು ವೇಳೆ ಟೆಂಡರ್/ ಸಂಧಾನದಲ್ಲಿ ಭಾಗವಹಿಸಿದಲ್ಲಿ, ಯಾವುದೇ ಹಂತದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**22) ಇತರೆ ಷರತ್ತು ನಿಯಮಗಳು :**

a) ಟೆಂಡರ್‌ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1 & H2 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.

b) ಟೆಂಡರ್‌ನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

c) ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

d) H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

e) ಪರವಾನಗಿ ಪಡೆದ ಪರವಾನಗಿದಾರರೇ ವ್ಯವಹಾರವನ್ನು ನಡೆಸುವುದು. ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.

f) ಜಾಹೀರಾತು ಅಳವಡಿಸುವ ಸಮಯದಲ್ಲಿ ವಾಹನಗಳ/ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ಹಾಗೂ ಬಸ್ಸಿನ ಅಂದ-ಚೆಂದಕ್ಕೆ ಯಾವುದೇ ರೀತಿ ಅಡಚಣೆಯಾಗದಂತೆ ನಿಗಾ ವಹಿಸುವುದು. ಈ ಸಂಬಂಧ ವಿಭಾಗೀಯ ತಾಂತ್ರಿಕ ಅಭಿಯಂತರರ ಮೇಲ್ವಿಚಾರಣೆಯಲ್ಲಿ ಜಾಹೀರಾತು ಅಳವಡಿಸುವುದು. ನಿಗಮದ ಬಸ್ಸು/ಆಸ್ತಿ-ಪಾಸ್ತಿಗೆ ಧಕ್ಕೆ/ಹಾನಿ ಉಂಟಾದಲ್ಲಿ ಸದರಿ ಮೊತ್ತವನ್ನು ಪರವಾನಿಗೆದಾರರಿಂದ ವಸೂಲಿ ಮಾಡುವುದು.

g) ಪರವನಿಗೆದಾರರು ತಮ್ಮ ಪರವಾನಿಗೆ ಅವಧಿ ಮುಕ್ತಾಯವಾದ ನಂತರ ಜಾಹೀರಾತು ಪ್ರದರ್ಶಿಸುವ ಸಂಬಂಧ ಅಳವಡಿಸಿರುವ ಜಾಹೀರಾತುಗಳನ್ನು ನಿಗಮದ ಆಸ್ತಿಪಾಸ್ತಿಗೆ

ಯಾವುದೇ ರೀತಿಯ ಹಾನಿಯಾಗದಂತೆ ತೆರವುಗೊಳಿಸಬೇಕು. ಒಂದು ವೇಳೆ ನಿಗದಿತ ಸಮಯದಲ್ಲಿ ತೆರವುಗೊಳಿಸದಿದಲ್ಲಿ, ನಿಗಮದ ವತಿಯಿಂದ ತೆರವುಗೊಳಿಸಲಾಗುವುದು ತೆರವುಗೊಳಿಸಲು ತಗಲುವ ವೆಚ್ಚವನ್ನು ಪರವಾನಿಗೆದಾರರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.

h) ಆಯ್ಕೆಗೊಂಡ ಪರವಾನಿಗೆದಾರರು ಎಲೆಕ್ಟ್ರಿಕಲ್ ಅಳವಡಿಕೆ/ಬೆಳಕಿನ ಅಳವಡಿಕೆ/ವೈರಿಂಗ್ ಇತ್ಯಾದಿ ಸುರಕ್ಷತಾ ಕ್ರಮಗಳ ಸಂಬಂಧ ನಿಗದಿತ ಪ್ರಾಧಿಕಾರಿಗಳಿಂದ ಪಡೆದ ದೃಡೀಕರಣ ಪತ್ರದ ಪ್ರತಿಯನ್ನು ಸಲ್ಲಿಸುವುದು. ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಪರವಾನಿಗೆದಾರರ ಜವಾಬ್ದಾರಿಯಾಗಿರುತ್ತದೆ.

i) ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

j) ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು. ನಿಗಮವು & ಸರ್ಕಾರದ ಇತರ ಇಲಾಖೆಯವರು ದಾಖಲೆಗಳನ್ನು ಹಾಜರುಪಡಿಸಲು ಕೋರಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ಕೂಡಲೇ ಸಲ್ಲಿಸಬೇಕಾಗಿರುತ್ತದೆ ಹಾಗೂ ಸದರಿ ಮಾಹಿತಿಯೊಂದಿಗೆ ದಾಖಲೆಗಳ ಪ್ರತಿಗಳನ್ನು ಈ ಕಛೇರಿಗೂ ಸಲ್ಲಿಸುವುದು.

k) ಜಾಹೀರಾತು ಏಜೆನ್ಸಿಗೆ/ವ್ಯವಹಾರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಇಲಾಖೆ / ಪ್ರಾಧಿಕಾರಗಳಿಂದ ಅನುಮತಿ ಪಡೆದು, ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಲು ಜವಾಬ್ದಾರರಾಗಿರುತ್ತಾರೆ. ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಕಾಲ-ಕಾಲಕ್ಕೆ ಒದಗಿಸಬೇಕು.

l) ಆಯ್ಕೆಗೊಂಡ ಪರವಾನಗಿದಾರರು ಅಳವಡಿಸಲು ಪ್ರಸ್ತಾಪಿಸುವ ಹೋರ್ಡಿಂಗ್ಸ್‌ಗಳಿಗೆ ಬೆಂಬಲವಾಗಿ ನಿಲ್ಲಿಸುವ ವಿನ್ಯಾಸಗಳಿಗೆ (Structure) ನೊಂದಾಯಿತ ವಿನ್ಯಾಸ ಅಭಿಯಂತರರು/ ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಣವನ್ನು ಪಡೆದ ಪ್ರತಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಪರಿಶೀಲನೆಗೆ ಸಲ್ಲಿಸುವುದು. ಒಂದು ವೇಳೆ ರಚನೆ / ವಿನ್ಯಾಸ / ಯೋಜನೆಯಲ್ಲಿ ನ್ಯೂನ್ಯತೆಯಿದ್ದಲ್ಲಿ 05 ದಿನಗಳೊಳಗೆ ಸರಿಪಡಿಸುವುದು. ಇಲ್ಲದಿದ್ದಲ್ಲಿ ನಿಗಮವು ನ್ಯೂನ್ಯತಾ ಕೆಲಸವನ್ನು ಅಥವಾ ಭಾಗವನ್ನು ತೆರವುಗೊಳಿಸಲು ಅಥವಾ ಸಂಬಂಧಿಸಿದ ಪರವಾನಿಗೆದಾರರಿಂದ ಮರುಪಾವತಿಸಿಕೊಳ್ಳಲಾಗುವುದು.

m) ಟೆಂಡರ್‌ನಲ್ಲಿ ವಿನ್ಯಾಸ (Structure) ಮತ್ತು ಯುನಿಪೋಲ್ ಒಳಗೊಂಡು ಆಹ್ವಾನಿಸಿರುವ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್‌ಬೋರ್ಡ್, ಫ್ಲಾಟ್ ಫಾರಂ ಫಲಕ, ಸ್ವಾಗತ ಕಮಾನು, ವಿಂಡೋ ಡಿಸ್‌ಪ್ಲೇ, ಹಾಗೂ ಆಯ್ಕೆಗೊಂಡ ಪರವಾನಗಿದಾರರು ಪರವಾನಿಗೆ ಅವಧಿ

ಕೊನೆಗೊಂಡು/ರದ್ದತಿಯಾದಲ್ಲಿ ಸದರಿ ವಿನ್ಯಾಸ (Structure) ಮತ್ತು ಯುನಿಪೋಲ್‌ನಲ್ಲಿ ಅಳವಡಿಸಿರುವ ಜಾಹೀರಾತು ತೆರವುಗೊಳಿಸಿ ಹೇಗಿದೆಯೋ ಹಾಗೆ ನಿಗಮದ ವಶಕ್ಕೆ ನೀಡುವುದು.

n) ಟೆಂಡರ್‌ನಲ್ಲಿ ಪ್ರಸ್ತಾಪಿಸುವ ವಿನ್ಯಾಸ (Structure) ಮತ್ತು ಯುನಿಪೋಲ್‌ಗೆ ಆಹ್ವಾನಿಸಿರುವ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್‌ಬೋರ್ಡ್, ಫ್ಲಾಟ್ ಫಾರಂ ಫಲಕ, ಸ್ವಾಗತ ಕಮಾನು, ವಿಂಡೋ ಡಿಸ್‌ಪ್ಲೇ, ಹಾಗೂ ಆಯ್ಕೆಗೊಂಡ ಪರವಾನಗಿದಾರರು ಪರವಾನಿಗೆ ಅವಧಿ ಕೊನೆಗೊಂಡು/ರದ್ದತಿಯಾದಲ್ಲಿ ಸದರಿ ವಿನ್ಯಾಸ (Structure) ಮತ್ತು ಯುನಿಪೋಲ್‌ನ ಜಾಹೀರಾತು ಹಾಗೂ ಸ್ಟ್ರಕ್ಚರ್ ಮತ್ತು ಯುನಿಪೋಲ್‌ನ್ನು ಸಂಪೂರ್ಣವಾಗಿ ತೆರವುಗೊಳಿಸಿ ಖಾಲಿ ನಿವೇಶವನ್ನು ನಿಗಮದ ವಶಕ್ಕೆ ನೀಡುವುದು ಅದಾಗ್ಯೂ ತೆರವುಗೊಳಿಸದೆ ಇದಲ್ಲಿ ನಿಗಮದ ವತಿಯಿಂದ ತೆರವುಗೊಳಿಸಿ ಭದ್ರತಾ ಠೇವಣಿ ಮುಟ್ಟುಗೊಲು ಹಾಕಿಕೊಂಡು Structure/ಯುನಿಪೋಲ್ ನ್ನು ನಿಗಮದ ವಶಕ್ಕೆ ಪಡೆದುಕೊಳ್ಳಲಾಗುವುದು.

o) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್‌ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

p) ಜಾಹೀರಾತಿನಲ್ಲಿ ಪ್ರದರ್ಶಿಸುವ ವಿವರಗಳು ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾರವರ ನಿರ್ದೇಶನಗಳಿಗೆ (ASCI CODE) ಒಳಪಟ್ಟಿರಬೇಕು. ಇದಕ್ಕೆ ಜಾಹೀರಾತುದಾರರು ಬದ್ದರಾಗಿರಬೇಕು.

q) ಜಾಹೀರಾತುಗಳಲ್ಲಿ ನಿಗಮ ಮತ್ತು ಸಹೋದರ ಸಂಸ್ಥೆಗಳ ವ್ಯವಹಾರಕ್ಕೆ ವ್ಯತಿರಿಕ್ತವಾದ ನಿಗಮಗಳ ಘನತೆಗೆ ಧಕ್ಕೆ ತರುವಂತಹ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ.

r) ಜಾಗೀರಾತುಗಳನ್ನು ಕನ್ನಡದಲ್ಲಿಯೂ ಪ್ರದರ್ಶಿಸುವುದು.

s) ಪರವಾನಿಗೆದಾರರು ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ.

t) ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್‌ನಂತೆ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ.

u) ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು/ಬಿಡ್‌ದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ನಿಗಮವು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.

v) ಪರವಾನಿಗೆದಾರರು/ಬಿಡ್‌ದಾರರು ಕಡ್ಡಾಯವಾಗಿ ಪಾನ್‌ಕಾರ್ಡ್ ಹೊಂದಿರಬೇಕಾಗಿರುತ್ತದೆ.

w) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

x) ಪರವಾನಗಿದಾರರು ಮತ್ತು ನಿಗಮದ ಮಧ್ಯೆ ಯಾವುದೇ ವ್ಯಾಜ್ಯ / ತಕರಾರು ಉಂಟಾದಲ್ಲಿ, ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮಧ್ಯಸ್ಥಿಕೆದಾರರಾಗಿರುತ್ತಾರೆ. ಸದರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

y) ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ)ನಿಯಮಗಳು, 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.

z) ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

aa) ಇ-ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ/ಪುರಸ್ಕರಿಸುವ/ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದರಿಸಿಕೊಂಡಿದೆ.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ.
ಕರಾರಸಾನಿಗಮ:ಮಂಗಳೂರು ವಿಭಾಗ.